

# ಸಹೋದರರ ಆದರ್ಶ

ಪ. ರಾಮಕೃಷ್ಣ ಶಾಸ್ತ್ರಿ

ಕಲೆ: ಸಂತೋಷ್ ಸಸಿಹಿತ್ಲು

ರಾಮ ಮತ್ತು ಕೃಷ್ಣ ಎಂಬ ಇಬ್ಬರು ಸಹೋದರರಿದ್ದರು. ಅವರು ಜಮೀನಿಗಾಗಿ ಎಂದಿಗೂ ತಮ್ಮೊಳಗೆ ಜಗಳ ಬರಬಾರದೆಂದು ಪಿತ್ರಾರ್ಜಿತವಾಗಿ ಬಂದ ಭೂಮಿಯನ್ನು ಸಮನಾಗಿ ಪಾಲು ಮಾಡಿಕೊಂಡು ಕೃಷಿ ಮಾಡುತ್ತಿದ್ದರು. ಕಾಲಾನಂತರದಲ್ಲಿ, ಅಣ್ಣನು ವಿವಾಹವಾದ, ಮಕ್ಕಳೂ ಆದವು. ಆದರೆ ತಮ್ಮ ಮದುವೆಯಾಗಲಿಲ್ಲ.

ಒಂದು ರಾತ್ರಿ, ಕೃಷ್ಣ ಮಲಗಿಕೊಂಡಿದ್ದ. ಅವನ ಮನಸ್ಸಿನಲ್ಲಿ ಒಂದು ಯೋಚನೆ ಬಂತು. ನಮ್ಮಲ್ಲಿ ಇಬ್ಬರಿಗೂ ವ್ಯವಸಾಯ ಮಾಡಲು ಅರ್ಧದಷ್ಟು ಭೂಮಿ ಇದೆ. ಆದರೆ ಹೀಗಿರುವುದು ಸರಿಯಲ್ಲ. ನನ್ನ ಸಹೋದರನಿಗೆ ಮಕ್ಕಳಿದ್ದಾರೆ. ನನಗೆ ಯಾರೂ ಇಲ್ಲ. ಅವನಿಗೆ ನನಗಿಂತ ಹೆಚ್ಚು ಧಾನ್ಯದ ಅಗತ್ಯವಿದೆ. ಸ್ವಾಭಿಮಾನಿಯಾದ ಅವನು ಹೀಗೆಯೇ ಕೊಟ್ಟರೆ ಹಿಡಿ ಧಾನ್ಯವನ್ನೂ ತೆಗೆದುಕೊಳ್ಳಲಾರ. ಅವನಿಗೆ ಗೊತ್ತಾಗದ ಹಾಗೆ ತಾನು ಉಪಕಾರ ಮಾಡಬೇಕು ಎಂದು ನಿರ್ಧರಿಸಿದ.

ಆ ರಾತ್ರಿ ಕೃಷ್ಣ ತನ್ನ ಕಣಜದಿಂದ ದೊಡ್ಡ ಚೀಲದಲ್ಲಿ ಅಕ್ಕಿಯನ್ನು ತುಂಬಿಸಿ ತಲೆಯ ಮೇಲೆ ಹೊತ್ತುಕೊಂಡ. ತಮ್ಮಿಬ್ಬರ ಹೊಲಗಳನ್ನು ಬೇರ್ಪಡಿಸುವ ಗಡಿಯಲ್ಲಿದ್ದ ಬೆಟ್ಟವನ್ನು ಹತ್ತಿ ಅಣ್ಣನ ಮನೆಗೆ ಹೋದ. ಅಣ್ಣನ ಕಣಜದಲ್ಲಿ ಅಕ್ಕಿಯನ್ನು ಸುರಿದು, ತನ್ನ ಬಗ್ಗೆ ಸಂತೋಷಪಡುತ್ತ ಮನೆಗೆ ಮರಳಿದ.

ಅದೇ ರಾತ್ರಿ, ಅಣ್ಣ ರಾಮ ಕೂಡ ಎಚ್ಚರವಾಗಿ ಯೋಚಿಸುತ್ತ ಮಲಗಿದ್ದ. ನಮ್ಮಲ್ಲಿ ಇಬ್ಬರಿಗೂ ವ್ಯವಸಾಯ ಮಾಡಲು ಸಮಪಾಲು ಭೂಮಿ ಇರುವುದು ಸರಿಯಲ್ಲ. ನನ್ನ ವೃದ್ಧಾಪ್ಯದಲ್ಲಿ ನನ್ನ ಹೆಂಡತಿ, ಮಕ್ಕಳು ನೋಡಿಕೊಳ್ಳುತ್ತಾರೆ. ಆದರೆ, ನನ್ನ ಸಹೋದರನಿಗೆ ನನ್ನವರೆನ್ನುವವರು ಯಾರೂ ಇಲ್ಲ. ಅವನಿಗೆ ನಾನೇನಾದರೂ ಸಹಾಯ ಮಾಡುತ್ತೇನೆಂದರೆ ಸ್ವಾಭಿಮಾನಿಯಾದ ಆತ ಒಪ್ಪಲಾರ. ಅವನಿಗೆ ಸಹಾಯ ಮಾಡದೆ ಇರಬಾರದು ಎಂದು ನಿರ್ಧರಿಸಿದ. ಗುಟ್ಟಾಗಿ ಒಂದು ದೊಡ್ಡ ಅಕ್ಕಿಯ ಮೂಟೆಯನ್ನು ಹೊತ್ತುಕೊಂಡು ಬೆಟ್ಟವನ್ನು ಹತ್ತಿದ. ತನ್ನ ತಮ್ಮನ ಕಣಜದಲ್ಲಿ ಅದನ್ನು ತುಂಬಿಸಿ ಮನೆಗೆ ಹಿಂದಿರುಗಿದ. ಅವನು ತನ್ನ ಬಗ್ಗೆ ಸಂತೋಷಪಟ್ಟ.

ಮರುದಿನ ಬೆಳಿಗ್ಗೆ, ಕೃಷ್ಣನು ತನ್ನ ಕಣಜದ ಬಳಿಗೆ ಹೋದಾಗ ಧಾನ್ಯದ ಪ್ರಮಾಣವು ಬದಲಾಗದೆ ಇರುವುದನ್ನು ಕಂಡು ಆಶ್ಚರ್ಯಚಕಿತನಾದನು. 'ನಾನು ನಿನ್ನೆ ತೆಗೆದುಕೊಂಡು ಹೋದ ಅಕ್ಕಿಯ ಪ್ರಮಾಣ ಕಡಿಮೆಯಿರಬಹುದು. ಇಂದು ರಾತ್ರಿ ನಾನು ಹೆಚ್ಚಿನದನ್ನು ತೆಗೆದುಕೊಂಡು ಹೋಗಬೇಕು' ಎಂದು ನಿರ್ಧರಿಸಿದ. ಅದೇ ಕ್ಷಣ, ಅವನ ಅಣ್ಣ ಕೂಡ ಅವನ ಕಣಜದ ಬಳಿಯಲ್ಲಿ ನಿಂತಿದ್ದ. ಅವನೂ ಅದೇ ಆಲೋಚನೆ ಮಾಡಿದ. ಮಧ್ಯರಾತ್ರಿಯ ಬಳಿಕ ಸಹೋದರರಿಬ್ಬರೂ ತಮ್ಮ ಕಣಜದಿಂದ ಹೆಚ್ಚಿನ ಪ್ರಮಾಣದ ಧಾನ್ಯವನ್ನು ರಹಸ್ಯವಾಗಿ ಪರಸ್ಪರರ ಕಣಜಕ್ಕೆ ಸೇರಿಸಿದರು. ಮರುದಿನ ಬೆಳಿಗ್ಗೆ ಮಾತ್ರ ಇಬ್ಬರೂ ಗೊಂದಲಕ್ಕೊಳಗಾದರು. ಧಾನ್ಯ ತೆಗೆದ ಹಾಗೆ ಇಬ್ಬರಿಗೂ ಅನಿಸಲಿಲ್ಲ. ಇಂದು ರಾತ್ರಿ ಚಕ್ಕಡಿ ತುಂಬ ಧಾನ್ಯದ ಮೂಟೆಗಳನ್ನು ತೆಗೆದುಕೊಂಡು ಹೋಗಿ ಕೃಷ್ಣನ ಮಹಡಿಗೆ ಇಳಿಸಬೇಕೆಂದು ರಾಮನು ನಿರ್ಧರಿಸಿದ. ಕೃಷ್ಣನು ಕೂಡ ರಾಮನ ಮಹಡಿಯಲ್ಲಿ ಒಂದು ಚಕ್ಕಡಿ ತುಂಬ ಧಾನ್ಯದ ಮೂಟೆಗಳನ್ನು ಇಳಿಸಲು ಯೋಚನೆ ಮಾಡಿದ.

ಅಂದು ರಾತ್ರಿ ಸಹೋದರರಿಬ್ಬರೂ ತಮ್ಮ ಕಣಜದಿಂದ ಧಾನ್ಯದ ಮೂಟೆಗಳನ್ನು ಚಕ್ಕಡಿಗೆ ತುಂಬಿಸಿ ಸಾಗಿಸತೊಡಗಿದರು. ಬೆಟ್ಟದ ತುದಿಯಲ್ಲಿ ಎರಡೂ ಚಕ್ಕಡಿಗಳು ಎದುರು ಬದುರಾದವು. ರಾಮನು ಚಕ್ಕಡಿಯನ್ನು ನಿಲ್ಲಿಸಿ, 'ಯಾರದು, ಈ ಅಪರಾತ್ರಿಯಲ್ಲಿ ಚಕ್ಕಡಿ ತುಂಬ ಧಾನ್ಯದ ಮೂಟೆ ಸಾಗಿಸುತ್ತಿರುವುದು?' ಎಂದು ಕೇಳಿದ. 'ಅದಿರಲಿ, ನನ್ನನ್ನು ಕೇಳುತ್ತಿದ್ದೀಯಲ್ಲ, ನೀನೂ ಧಾನ್ಯದ ಮೂಟೆ ಸಾಗಿಸುತ್ತಿರುವಂತಿದೆ. ಎಲ್ಲಿಗೆ?' ಎಂದು ಪ್ರಶ್ನಿಸಿದ ಕೃಷ್ಣ.

'ನಾನು ಸ್ವಾಭಿಮಾನಿಯಾದ ನನ್ನ ತಮ್ಮ ಕೃಷ್ಣನ ಮನೆಯಲ್ಲಿ ಇಳಿಸಿ ಬರಲು ಇದನ್ನು ಸಾಗಿಸುತ್ತಿದ್ದೇನೆ. ತೆಗೆದುಕೋ ಎಂದು ಕೊಟ್ಟರೆ ಅವನು ತೆಗೆದುಕೊಳ್ಳಲಾರ' ಎಂದ ರಾಮ. 'ನಾನೂ ಅಷ್ಟೇ. ನನಗೆ ಮದುವೆಯಾಗಿಲ್ಲ. ಅಣ್ಣ ರಾಮನಿಗೆ ದೊಡ್ಡ ಸಂಸಾರವಿದೆ. ಅವನಿಗೆ ಕಷ್ಟವಾಗಬಾರದು ಎಂದು ಮನೆಯೊಳಗೆ ಇರಿಸಲು ಧಾನ್ಯದ ಮೂಟೆಗಳೊಂದಿಗೆ ಹೊರಟಿದ್ದೇನೆ' ಎಂದ ಕೃಷ್ಣ.

ಗಾಡಿಯ ಕಂದೀಲಿನ ಬೆಳಕಿನಲ್ಲಿ ಇಬ್ಬರೂ ಮುಖ ನೋಡಿಕೊಂಡರು. ಇಬ್ಬರಿಗೂ ಗುರುತು ಸಿಕ್ಕಿತು. 'ನಾನು ಎಂತಹ ಗುಣಶಾಲಿ ತಮ್ಮನನ್ನು ಪಡೆದುಕೊಂಡಿದ್ದೇನೆ' ಎಂದು ಉದ್ಗರಿಸಿದ ರಾಮ. ಕೃಷ್ಣನು, 'ನಿನ್ನಂತಹ ಅಣ್ಣನಿರುವುದು ನನ್ನ ದೊಡ್ಡ ಸೌಭಾಗ್ಯ' ಎಂದು ಹೇಳಿ ಅಣ್ಣನನ್ನು ಅಪ್ಪಿಕೊಂಡ. ರಾಮನು, 'ತಮ್ಮ, ನಾವು ಇಬ್ಬರೂ ಪ್ರತ್ಯೇಕವಾಗಿರುವುದು ಬೇಡ. ಇಬ್ಬರೂ ಒಂದೇ ಮನೆಯಲ್ಲಿದ್ದು ಒಟ್ಟಿಗೆ ವ್ಯವಸಾಯ ಮಾಡಿಕೊಂಡಿರೋಣ. ನಿನಗೆ ಉತ್ತಮ ಸಂಬಂಧವನ್ನು ಹುಡುಕಿ ಮದುವೆಯನ್ನೂ ಮಾಡುತ್ತೇನೆ. ನಾವು ಆದರ್ಶ ಸಹೋದರರಾಗಿರಬೇಕು' ಎಂದು ಹೇಳಿದ.